**<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>**
**<u>ದಕ್ಷಿಣ ಕನ್ನಡ, ಮಂಗಳೂರು</u>**

**<u>ಸೆಷನ್ಸ್ ಕೇಸ್ ನಂಬ್ರ 211/2023</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಗೋವಿಂದ ನಾಯ್ಕ | <u>ಪ್ರಾಸಾಃ 6</u> |
| ತಂದೆಯ ಹೆಸರು | : | ಐತು ನಾಯ್ಕ | ಚಾಸಾಃ 11 |
| ಪ್ರಾಯ | : | 57 ವರ್ಷ | **ದಿನಾಂಕಃ 25.02.2026** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಕಾರ್ಯ ನಿರ್ವಾಹಣಾಧಿಕಾರಿ, ಶ್ರೀ ಭಾಗ್ಯವಂತಿ ದೇವಾಲಯ, ಅಫ್ಜಲ್ ಪುರ, ಗುಲ್ಬರ್ಗ | |
| ವಾಸಸ್ಥಳ | : | ಗುಲ್ಬರ್ಗ | |

**<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>**

ನಾನು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ , ದಕ್ಷಿಣ ಕನ್ನಡ ಮಂಗಳೂರಿನಲ್ಲಿ ಸಹಾಯಕ ಆಯುಕ್ತನಾಗಿ ದಿನಾಂಕ 10.07.2023 ರಿಂದ 16.07.2025 ರವರೆಗೆ ಕಾರ್ಯ ನಿರ್ವಹಿಸಿರುತ್ತೇನೆ.

2. ವೇಣೂರು ಪೋಲಿಸ್ ಠಾಣೆಯ ಠಾಣಾಧಿಕಾರಿಯವರು ಅವರ ಠಾಣೆಯ ಅಪರಾಧ ಕ್ರಮಾಂಕ 39/2023 ಕ್ಕೆ ಸಂಬಂಧಪಟ್ಟಂತೆ ಶ್ರೀ ಕೊರಗಕಲ್ಲು ಸ್ವಾಮಿ ಕೊರಗಜ್ಜ ಸೇವಾ ಟ್ರಸ್ಟ್ ಬಾಡಾರು , ಬಜಿರೆ ಗ್ರಾಮ ಮತ್ತು ಶ್ರೀ ಸ್ವಾಮಿ ಸೇವಾ ಕೊರಗಜ್ಜ ಟ್ರಸ್ಟ್ ( Regd) ಎಂಬ ಟ್ರಸ್ಟ್ ಗಳು ಧಾರ್ಮಿಕ ದತ್ತಿ ಇಲಾಖೆಗೆ ಒಳಪಟ್ಟಿದೆಯೇ ಹಾಗೂ ಧಾರ್ಮಿಕ ದತ್ತಿ ಇಲಾಖೆಯಲ್ಲಿ ನೋಂದಣಿಯಾಗಿದೆಯೇ ಎಂಬ ಬಗ್ಗೆ ದೃಢಪತ್ರ ನೀಡುವಂತೆ ದಿನಾಂಕ 24.07.2023 ರ ಪತ್ರದಲ್ಲಿ ಕೋರಿಕೊಂಡಿರುತ್ತಾರೆ. ಅದರಂತೆ ನಾನು ಇಲಾಖೆಯಲ್ಲಿ ನಿರ್ವಹಿಸಲ್ಪಟ್ಟ

ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಸದರಿ ಎರಡು ಸೇವಾ ಟ್ರಸ್ಟ್ ಗಳು ನಮೂದಾಗಿರುವುದಿಲ್ಲ ಎಂಬುದಾಗಿ ಸದರಿ ಠಾಣೆಗೆ ದಿನಾಂಕ 04.08.2023 ರಂದು ದೃಢಪತ್ರವನ್ನು ನೀಡಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ದೃಢಪತ್ರವನ್ನು **ನಿಪಿ-12** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-12(ಎ)** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ವಿ.ಕೆ ವಕೀಲರಿಂದ**

3. ನಿಪಿ-12 ರ ಪ್ರಕಾರ ಕೊರಗಜ್ಜ ಕಟ್ಟೆಯ ಬಗ್ಗೆ ಡಾಃ ರಾಜೇಶ್ , ಬಾರ್ದಿಲ ಮ್ಯಾನೇಜಿಂಗ್ ಟ್ರಸ್ಟಿ ಸ್ವಾಮಿ ಕೊರಗಜ್ಜ ಸೇವಾ ಟ್ರಸ್ಟ್ (ರಿ), ಕೊರಗಲ್ಲು ಬಾಡಾರು, ಬಜಿರೆ ಗ್ರಾಮ, ಬೆಳ್ತಂಗಡಿ ಎಂದು ನಮೂದು ಇದೆ. ಸಾಕ್ಷಿ ಮುಂದುವರಿದು ನನಗೆ ಠಾಣೆಯಿಂದ ಬಂದ ಪತ್ರದಲ್ಲಿ ಮೇಲಿನ ಅಂಶಗಳು ನಮೂದಾಗಿದ್ದು, ಅದನ್ನು ನಿಪಿ-12 ರಲ್ಲಿ ತೋರಿಸಿರುತ್ತೇನೆ. ನನಗೆ ಸದರಿ ಟ್ರಸ್ಟಿನ ಮ್ಯಾನೇಜಿಂಗ್ ಟ್ರಸ್ಟಿ ಡಾಃ ರಾಜೇಶ್ ಹೌದಾ ಅಥವಾ ಅಲ್ಲವೋ ಎಂದು ನನಗೆ ವೈಯಕ್ತಿಕವಾಗಿ ತಿಳಿದಿಲ್ಲ. ಸದರಿ ಮಾಹಿತಿ ವೇಣೂರು ಠಾಣೆಯವರಿಗೆ ಇರುತ್ತದಾ ಎಂದರೆ ನನಗೆ ತಿಳಿದಿಲ್ಲ. ಅದೇ ಪ್ರಕಾರ ನಿಪಿ-12 ರಲ್ಲಿ ಪ್ರದೀಪ್ ಕುಮಾರ್ ಹೆಗ್ಡೆಯವರು ಕೊರಗಲ್ಲು ಸ್ವಾಮಿಕೊರಗಜ್ಜ ಸೇವಾ ಟ್ರಸ್ಟ್ ಕೊರಗಲ್ಲು ಬಾಡಾರು ಎನ್ನುವ ನಮೂದನ್ನು ಕಾಣಿಸಿರುವುದು ಪೋಲಿಸರು ಕೊಟ್ಟ ಪತ್ರದಲ್ಲಿ ಇದ್ದ ಕಾರಣ. ನನಗೆ ಅದರ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ. ಅವುಗಳ ಬಗ್ಗೆ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ.

4. ನಿಮ್ಮ ಧಾರ್ಮಿಕ ದತ್ತಿ ಇಲಾಖೆಯಲ್ಲಿ ಸದರಿ ಟ್ರಸ್ಟ್ ನೋಂದಣಿ ಆಗಿರುವುದಿಲ್ಲ ಎಂದು ದಾಖಲಾತಿಗಳನ್ನು ಪರಿಶೀಲಿಸಿ ನಿಪಿ-12 ರಲ್ಲಿ ನಮೂದು

ಮಾಡಲಾಗಿರುತ್ತದೆ ಎಂದರೆ ಸರಿ. ಪ್ರದೀಪ್ ಕುಮಾರ್ ರವರಿಗೆ ಅಥವಾ ಕೊರಗಜ್ಜ ಟ್ರಸ್ಟ್ ರವರಿಗೆ ಕಟ್ಟಡ ಕಟ್ಟಲು ಅಥವಾ ಕಾಮಗಾರಿ ಮಾಡಲು ನಿಮ್ಮ ಇಲಾಖೆಯಿಂದ ಅನುಮತಿ ಕೊಡಲಾಗಿತ್ತಾ ಎಂದರೆ ಇಲ್ಲ.

5. ನಿಪಿ-12 ರ ಮಾಹಿತಿಯನ್ನು ಪೋಲಿಸ್ ಠಾಣೆಯವರು ಕೇಳಿದ್ದು, ಅದು ಸರ್ಕಾರಿ ರಸ್ತೆಯ ಮಾರ್ಜಿನ್ ನಲ್ಲಿ ಬರುವ ವಿವಾದಕ್ಕೆ ಸಂಬಂಧಪಟ್ಟಿದ್ದು ಎಂದು ನಿಮಗೆ ತಿಳಿದಿರುತ್ತದಾ ಎಂದರೆ ಅದರ ಬಗ್ಗೆ ನನಗೆ ತಿಳಿದಿಲ್ಲ. ಪೋಲಿಸರು ನೀಡಿದ ಪತ್ರದಲ್ಲಿ ಸದರಿ ಮೇಲಿನ ಅಂಶಗಳು ನಮೂದು ಇರಲಿಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.